# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 671 |
| 2. ಸದಸ್ಯರ ಹೆಸರು | : | ಶ್ರೀ ಶರಣಗೌಡ ಬಯ್ಯಪುರ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. ಉತ್ತರಿಸಬೇಕಾದ ದಿನಾಂಕ | : | 19.08.2025 |
| 4. ಉತ್ತರಿಸುವವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಕೋರಿರುವ ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನ ಮುದಗಲ್ ಪಟ್ಟಣಕ್ಕೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಗೆ ರೂ.44.79 ಕೋಟಿಗಳ ಅನುದಾನವನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | • ಸರ್ಕಾರದ ಆದೇಶ ಸಂಖ್ಯೆ: ನಅಇ 381 ಪಿ.ಆರ್.ಜೆ 2017 ದಿನಾಂಕ:15.12.2017 ರಲ್ಲಿ ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಮುದಗಲ್ ಪಟ್ಟಣದಲ್ಲಿ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ 9 ಪಟ್ಟಣಗಳ ಯೋಜನೆಯಡಿ ಕುಡಿಯುವ ನೀರು ಸರಬರಾಜು ಉನ್ನತೀಕರಣ ಯೋಜನೆ ಅನುಷ್ಠಾನಗೊಳಿಸಲು ಅನುಮೋದನೆಯಾಗಿರುತ್ತದೆ.<br>• ಈ ಯೋಜನೆಗೆ ರೂ.34.96 ಕೋಟಿಗಳ ಅಂದಾಜು ಮೊತ್ತದಲ್ಲಿ ಶೇ.50 ರಷ್ಟು ಸರ್ಕಾರದ ಅನುದಾನ ಹಾಗೂ ಶೇ.50 ರಷ್ಟು ಪುರಸಭೆಯ ಪರವಾಗಿ ಮಾರುಕಟ್ಟೆ ಸಾಲ ಪಡೆದು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿತ್ತು. |
| ಆ) | ನಿಗದಿಪಡಿಸಿದ ಅನುದಾನದಲ್ಲಿ ಈವರೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; ಬಾಕಿ ಉಳಿದಿರುವ ಅನುದಾನವೆಷ್ಟು; | • ಈ ಯೋಜನೆಗೆ ರೂ.34.96 ಕೋಟಿಗಳ ಅಂದಾಜು ಮೊತ್ತದಲ್ಲಿ ಶೇ.50 ರಷ್ಟು ಸರ್ಕಾರದ ಅನುದಾನ ಹಾಗೂ ಶೇ.50 ರಷ್ಟು ಪುರಸಭೆಯ ಪರವಾಗಿ ಮಾರುಕಟ್ಟೆ ಸಾಲ ಪಡೆದು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿತ್ತು.<br>• ನಿಗದಿಪಡಿಸಿದ ಅನುದಾನದಲ್ಲಿ ಈವರೆಗೆ ರೂ.6.62 ಕೋಟಿಗಳನ್ನು ಬಿಡುಗಡೆ ಮಾಡಿ ವೆಚ್ಚ ಮಾಡಲಾಗಿದ್ದು, ಮಾರುಕಟ್ಟೆ ಸಾಲ ಪಡೆಯಲು ಸಾಧ್ಯವಾಗದ ಕಾರಣ ಬಾಕಿ ಅನುದಾನ ಲಭ್ಯವಿರುವುದಿಲ್ಲ. |
| ಇ) | ಬಾಕಿ ಉಳಿದಿರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು) | • ಮುದಗಲ್ ಪಟ್ಟಣದ ಕಾಮಗಾರಿಗಾಗಿ ರೂ.31.29 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ಗುತ್ತಿಗೆದಾರರಾದ ಮೇ\|\| ಎ.ಎಸ್.ಆರ್ ಇಂಜಿನಿಯರಿಂಗ್ ಮತ್ತು ಪ್ರಾಜೆಕ್ಟ್ಸ್ ಲಿಮಿಟೆಡ್, ಹೈದ್ರಾಬಾದ್ ರವರಿಗೆ ಟೆಂಡರ್ ಮುಖಾಂತರ ದಿನಾಂಕ:07.03.2018 ರಂದು ವಹಿಸಿಕೊಡಲಾಗಿತ್ತು.<br>• ಸದರಿ ಕಾಮಗಾರಿಯನ್ನು ದಿನಾಂಕ:07.03.2018 ರಂದು ಪ್ರಾರಂಭಿಸಲಾಗಿದ್ದು, 18 ತಿಂಗಳೊಳಗೆ (06.09.2019) ಪೂರ್ಣಗೊಳಿಸಬೇಕಾಗಿತ್ತು.<br>• ಆದರೆ ಕೋವಿಡ್ ಹಾಗೂ ಗುತ್ತಿಗೆದಾರರ ವಿಳಂಬ ದೋರಣೆಯಿಂದ ಕೇವಲ ಶೇ. 27% ರಷ್ಟು ಪ್ರಗತಿಯ ಕಾರಣ (ರೂ.6.62 ಕೋಟಿ ವೆಚ್ಚ) ಮುದಗಲ್ ಪಟ್ಟಣದ ಗುತ್ತಿಗೆಯನ್ನು ಜುಲೈ-2023 ರಂದು ರದ್ದುಪಡಿಸಿ ಕಾಮಗಾರಿಯನ್ನು ಯಥಾಸ್ಥಿತಿಯಲ್ಲಿ ಮುದಗಲ್ ಪುರಸಭೆಗೆ ಹಸ್ತಾಂತರಿಸಲಾಗಿರುತ್ತದೆ. |
| ಈ) | ಈ ಕುಡಿಯುವ ನೀರಿನ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು) | |

| | | |
|---|---|---|
| | | • ಮುದಗಲ್ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಬಾಕಿ ಕಾಮಗಾರಿಗಳನ್ನು ಆರ್ಥಿಕ ಇಲಾಖೆಯ ದಿನಾಂಕ:23.01.2024 ರ ಹಿಂಬರಹದನ್ವಯ ಅಮೃತ್ 2.0 ಅಡಿ ಹಾಗೂ ಕಾಸ್ಟ್ & ರಿಸ್ಕ್ ಮೊತ್ತದಡಿ ಕೈಗೆತ್ತಿಕೊಳ್ಳಲು ಸೂಚನೆ ನೀಡಲಾಗಿದ್ದು, ಆ ಪ್ರಕಾರ ಕ್ರಮ ಜರುಗಿಸಲು 7ನೇ ಅಧಿಕಾರಯುತ ಸಮಿತಿ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ.<br><br>• ಅಮೃತ್ 2.0 ಅಡಿ ಬಾಕಿ ಕಾಮಗಾರಿಗಳಿಗೆ ಅನುದಾನದ ಲಭ್ಯತೆ ಇರುವುದಿಲ್ಲ.<br><br>• ಮುದಗಲ್ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಬಾಕಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಗರ ಸ್ಥಳೀಯ ಸಂಸ್ಥೆಯ ಸ್ವಂತ ಸಂಪನ್ಮೂಲದಿಂದ ಹಾಗೂ ಮೂಲ ಗುತ್ತಿಗೆದಾರರ ಕಾಸ್ಟ್ & ರಿಸ್ಕ್ ಮೊತ್ತದಿಂದ (ಈ ಕುರಿತು ರಾಯಚೂರು ಜಿಲ್ಲಾಧಿಕಾರಿಗಳಿಗೆ Risk & Cost ಮೊತ್ತವನ್ನು Arrears of land revenue ಆಗಿ ವಸೂಲಿ ಮಾಡಲು ಕೋರಲಾಗಿದೆ) ಬಾಕಿ ಕಾಮಗಾರಿಗಳನ್ನು ಪುನರ್ ಪ್ರಾರಂಭಿಸಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಪುರಸಭೆಗೆ ತಿಳಿಸಲಾಗಿದೆ.<br><br>• ದಿನಾಂಕ:07.03.2018 ರಿಂದ 25.03.2024 ರವರೆಗೆ ಕೆಯುಐಡಿಎಫ್‌ಸಿ ವತಿಯಿಂದ ಕುಡಿಯುವ ನೀರು ಸರಬರಾಜು ಯೋಜನೆ ಕೈಗೊಳ್ಳುತ್ತಿರುವುದರಿಂದ ಇತರೆ ಕುಡಿಯುವ ನೀರು ಯೋಜನೆಯಲ್ಲಿ (ಅಮೃತ್-2.0 ಜೆ.ಜೆ.ಎಂ) ಅವಕಾಶ ದೊರೆಯಲಿಲ್ಲವಾದ್ದರಿಂದ ಕಾಮಗಾರಿ ಪೂರ್ಣಗೊಳಿಸಲು ಅನುದಾನ ಬಿಡುಗಡೆ ಮಾಡಿ ಅನುಮತಿ ನೀಡಿದ್ದಲ್ಲಿ, ಉಳಿದ ಕಾಮಗಾರಿಗೆ ಹೊಸದಾಗಿ ಟೆಂಡರ್ ಕರೆದು ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಯೋಜನಾ ನಿರ್ದೇಶಕರು, ವರದಿ ಮಾಡಿರುತ್ತಾರೆ.<br><br>• ಈಗಾಗಲೇ ರದ್ದುಮಾಡಿರುವ ಗುತ್ತಿಗೆದಾರರಿಂದ Risk & Cost ಮೊತ್ತವನ್ನು Arrears of land revenue ಆಗಿ ವಸೂಲಿ ಮಾಡಿ ಬಾಕಿ ಕಾಮಗಾರಿಗಳನ್ನು ಪುರಸಭೆ ವತಿಯಿಂದ ಪುನರ್ ಪ್ರಾರಂಭಿಸಿ ಪೂರ್ಣಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು. |

ಕಡತ ಸಂಖ್ಯೆ: ನಅಇ 151 ಪಿ.ಆರ್.ಜೆ 2025

**(ಬಿ. ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು